ಅನಾಧೀನ ಜಮೀನು ಸಕ್ರಮಗೊಳಿಸುವ ಬಗ್ಗೆ

519 - ಶ್ರೀ ಕೆ. ಕುಶಾಲ, (ಸುಳ್ಯ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಬರುವ ಕಾಣೆ, ಬಾಣೆ, ಸರಕಾರಿ ಅನಾಧೀನ ಜಮೀನುಗಳನ್ನು ಕೆಲವು ಜಿಲ್ಲೆಯಲ್ಲಿ ಹಲವು ವರ್ಷಗಳಿಂದ ಬಡಕೃಷಿ ಕಾರ್ಮಿಕರು ಹಾಗೂ ಹೆಚ್ಚಿನ ರೈತರು ಅಕ್ರಮ ಸಾಗುವಳಿ ಮಾಡಿಕೊಂಡು ಬರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಆ) *ಸದರಿ ಕಾಣೆ, ಬಾಣೆ ಜಮೀನುಗಳನ್ನು ಅಕ್ರಮ ಸಾಗುವಳಿ ಕೃತವನ್ನು ದರಖಾಸ್ತು ಖಾಯಂಗೊಳಿಸಲು ಸರಕಾರ ಕೈಗೊಂಡ ಕ್ರಮ ಏನು;*

ಇ) *ಸದರಿ ಜಮೀನುಗಳನ್ನು ಸರಕಾರ ಈ ಸಲದ ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವ ಸರಕಾರದ ನಿಯಮಾವಳಿಯಲ್ಲಿ ಅಳವಡಿಸಿ ಕೊಂಡಿರುವುದೇ;*

ಈ) *ಸದರಿ ಅಕ್ರಮ ಜಮೀನು ಸಕ್ರಮಗೊಳಿಸುವ ಈ ಸಲದ ನಿಯಮಾವಳಿಯಲ್ಲಿ ಈ ಜಮೀನಿನ ದರಖಾಸ್ತು ಖಾಯಂ ನೀಡುವ ಆದೇಶವನ್ನು ಕೈಗೊಳ್ಳಬಾರದೇಕೆ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಇಲ್ಲ.

ಈ) ಸದರಿ ಜಮೀನುಗಳು ಮೂಲತಃ ಅಕ್ಕಪಕ್ಕದ ಜಮೀನುದಾರರಿಗೆ ಬೇಸಾಯಕ್ಕೆ ಅನುಕೂಲವಾಗುವಂತೆ, ದಟ್ಟವಾದ ಅರಣ್ಯವುಳ್ಳ ವಿಶೇಷ ಸವಲತ್ತುಗಳುಳ್ಳ ಜಮೀನುಗಳಾಗಿದ್ದು ಇವುಗಳನ್ನು ಸಕ್ರಮಗೊಳಿಸುವುದಾಗಲೀ ಅಥವಾ ಮಂಜೂರು ಮಾಡುವ ಬಗ್ಗೆ ಪ್ರತ್ಯೇಕವಾಗಿ ಪರಿಶೀಲಿಸಬೇಕಾಗಿದೆ.

ಶ್ರೀ ಚನ್ನಕೇಶವ ದೇವಾಲಯದ ಬಗ್ಗೆ

520 - ಶ್ರೀ ಕೆ. ಕುಶಾಲ (ಸುಳ್ಯ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಸುಳ್ಯ ಶ್ರೀ ಚನ್ನಕೇಶವ ದೇವಾಲಯವು ಧಾರ್ಮಿಕ ದತ್ತಿ ಇಲಾಖೆಗೆ ಸೇರಿರುತ್ತದೆಯೇ?*

ಆ) *ಹಾಗಿದ್ದಲ್ಲಿ, ಆಡಳಿತ ಮಂಡಳಿ ಸಮಿತಿಯ ರಚನೆ ಯಾವ ವರ್ಷ ಆಗಿರುತ್ತದೆ..*

ಇ) *ಆಡಳಿತ ಮಂಡಳಿ ಸಮಿತಿಯ ಅವಧಿ ಮುಗಿದಿದ್ದರೂ ಹೊಸ ಸಮಿತಿಯನ್ನು ರಚಿಸದೆ ಇರಲು ಕಾರಣವೇನು?*

ಈ) *ಸದ್ರಿ ದೇವಾಲಯದ ಆಡಳಿತ ಮಂಡಳಿಯ ಸಮಿತಿಯನ್ನು ರಚಿಸಲು ಯಾವ ಕ್ರಮ ಕೈಗೊಂಡಿದೆ.*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು

ಆ) 1982ರಲ್ಲಿ

ಇ) ಕರ್ನಾಟಕ ಅಪೀಲು ನ್ಯಾಯಾಧಿಕರಣದಿಂದ ಸಮಿತಿ ಪುನರ್ ರಚಿಸದಂತೆ ತಡೆಯಾಜ್ಞೆ ಇದೆ.

ಈ) ನ್ಯಾಯಾಧಿಕರಣದ ತೀರ್ಪು ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.